ದಿನಾಂಕ**: 21.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು**.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ ಬಿ ಎಲ್ ವಕೀಲರಿಂದಃ-

ದಾವೆಯನ್ನು ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆ ನನ್ನ ಹೆಸರಿನಲ್ಲಿತ್ತು. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿರುತ್ತಾರೆ ಎಂಬುದನ್ನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಮುನಿಯಪ್ಪನವರ ತಂದೆಯ ಹೆಸರು ರಾಮಪ್ಪ. ನಿಪಿ.12 ರಲ್ಲಿ ಕಾಣುತ್ತಿರುವ ಮನೆ ಮುನಿಯಪ್ಪ ಬಿನ್ ರಾಮಪ್ಪನವರದ್ದು ಎಂದರೆ ಸರಿ. ನಿಪಿ.12 ರ ಮನೆಯ ದಕ್ಷಿಣಕ್ಕೆ ಒಂದು ಕಿಟಕಿ ಇದೆ ಎಂದರೆ ಸರಿ. ಸದರಿ ಮನೆಯ ದಕ್ಷಿಣಕ್ಕೆ ಸದರಿ ಮುನಿಯಪ್ಪನವರ ಯಾವುದೇ ಆಸ್ತಿ ಇರುವುದಿಲ್ಲ. ನಿಪಿ.12 ರಲ್ಲಿ ಕಾಣುತ್ತಿರುವ ಮನೆಯ ಕಿಟಕಿಯ ಮೇಲೆ 2 ಅಡಿ ಸರ್ಜಾ ಬಿಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಜಾಗದಲ್ಲಿ ಸದರಿ ಸರ್ಜಾ ಬಿಟ್ಟುರುತ್ತಾರೆ. ಸದರಿ ಸರ್ಜಾ ವನ್ನು ತೆಗೆಯುವ ವಿಚಾರವಾಗಿ ನಾನು ಯಾವುದೇ ದೂರು ಕೊಟ್ಟಿರುವುದಿಲ್ಲ.

2. ನಿಪಿ.9 ರಲ್ಲಿ ಕಾಣುತ್ತಿರುವ ಸ್ನಾನದ ಮನೆ ಪ್ರತಿವಾದಿಗಳದ್ದು ಎಂದರೆ ಸರಿ. ಸದರಿ ಸ್ನಾನದ ಮನೆವನ್ನು ಕಟ್ಟುವ ಸಮಯದಲ್ಲಿ ನಾವು ಗಲಾಟೆಯನ್ನು ಮಾಡಿರುತ್ತೇವೆ. ನಿಪಿ.10 ರಲ್ಲಿ ಕಾಣುತ್ತಿರುವ ಕೂಚಗಳು ಮತ್ತು ಶೀಟಿನ ಜಾಗ ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸಾಕ್ಷಿಯೂ ಅದರಲ್ಲಿ 2 ಅಡಿ ನನ್ನ ಜಾಗ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸದರಿ ಕೂಚಗಳು ಮತ್ತು ಶೀಟುಗಳನ್ನು ಹಾಕಿ ಸುಮಾರು 12 ವರ್ಷಗಳು ಆಗಿರುತ್ತವೆ. ದಾವಾ ಸ್ವತ್ತನ್ನು ಅಳತೆ ಮಾಡಲು ಅರ್ಜಿಯನ್ನು ನೀಡಿರುವುದಿಲ್ಲ. ಈ ದಾವೆಯನ್ನು 2 ಅಡಿಯನ್ನು ಬಿಟ್ಟುಕೊಡಲು ಕೋರಿ ಸಲ್ಲಿಸಿರುತ್ತೇನೆ. ಪ್ರತಿವಾದಿಗಳ ಆಸ್ತಿ ಎಷ್ಟು ಇದೆ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಪ್ರತಿವಾದಿಗಳು ತಮ್ಮ 34 X 30 ರಲ್ಲಿ ಮಾತ್ರ ಮನೆ ಕಟ್ಟಿಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅದರಲ್ಲಿ 2 ಅಡಿ ನನ್ನದು ಇರುತ್ತದೆ ಎಂದು ಉತ್ತರಿಸಿರುತ್ತಾರೆ.

3. ದಾವಾ ಸ್ವತ್ತು ಉತ್ತರ-ದಕ್ಷಿಣವಾಗಿ 12 ಅಡಿ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಆ ಪ್ರಕಾರ ಪಂಚಾಯತಿಯವರು ಮಹಜರ್ ಮಾಡಿ 12 ಅಡಿ ಮಾತ್ರ ಇರುತ್ತದೆ ಎಂದು ದಾಖಲೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ದಾಖಲೆಗಳು ಬೋಗಸ್ ಮಾಡಿ ಸೃಷ್ಟಿಸಿರುತ್ತಾರೆ ಎಂದು

ಉತ್ತರಿಸಿರುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಮುನಿಯಪ್ಪ ಬಿನ್ ರಾಮಪ್ಪ ನವರು ದಾವಾ ಸ್ವತ್ತಿಗೇ 3 ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ, ಆದರೆ ನಾನು ಸದರಿ ಮುನಿಯಪ್ಪನವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿಗೆ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.